ಪಿ.ಡಬ್ಲ್ಯೂ.1. ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಿದ
ದಿನಾಂಕಃ 08.05.2024
ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಹೆಚ್.ಎಮ್.ಪಿ. ವಕೀಲರಿಂದ

6. ನಾನು ಚಿಕ್ಕನಳ್ಳಿ ವಾಸಿ ಇದ್ದು ಅಲ್ಲಿಯೇ ಇರುತ್ತೇನೆ. ನನಗೆ ಸೇರಿದ ಯಾವುದೇ ಶಾಲೆ, ವೃದಾಶ್ರಮ, ಆಸ್ಪತ್ರೆ, ಹಾಸ್ಟಲ್ ಚಿಕ್ಕನಳ್ಳಿಯಲ್ಲಿ ಇರುವುದಿಲ್ಲ. ನಾನು ಡಿ.ಎಸ್.ಎಸ್. ಕಾರ್ಯಕರ್ತ ಅಲ್ಲ. ಆದರೆ ಸಮಾಜ ಸೇವಕ. ನಾನು ಡಿ.ಎಸ್.ಎಸ್. ಕಾರ್ಯಕರ್ತ ಇದ್ದು ಸುರಪೂರದಲ್ಲಿ ನನ್ನ ಕಛೇರಿ ಸಹ ಇದೆ ಎಂದರೆ ಸರಿಯಲ್ಲ. ಸುರಪೂರದಲ್ಲಿ ನಮ್ಮ ಡಿ.ಎಸ್.ಎಸ್. ಕಛೇರಿ ಇದ್ದು ನಾನು ಪ್ರತಿ ದಿನ ಹೋಗಿ ಬಂದು ಮಾಡುತ್ತೇನೆ ಎಂದರೆ ಸರಿಯಲ್ಲ. ತಿಮ್ಮಯ್ಯ ಮತ್ತು ಲಕ್ಷ್ಮಿಬಾಯಿ ಬೇರೆ ಯಾದವ ಜಾತಿಯವರು ಎಂದರೆ ಸರಿ. ಚಿಕ್ಕನಳ್ಳಿ ಗ್ರಾಮದಲ್ಲಿ ಯಾದವ ಸಮಾಜದ 30 ರಿಂದ 40 ಮನೆಗಳು ಇವೆ. ಯಾದವ ಸಮುದಾಯದ ಆರ್.ಎಮ್.ಪಿ. ವೈದ್ಯರು ರಾಯಪ್ಪ ತಂದೆ ನರಸಪ್ಪ ಇದ್ದಾರೆ ಎಂದರೆ ಸರಿ.

7. ದಿನಾಂಕಃ 28-02-2015 ರಂದು ಬೆಳಿಗ್ಗೆ 11-45 ಗಂಟೆಗೆ ಹೇಳಿಕೆ ಫಿರ್ಯಾದಿಯನ್ನು ಕೊಟ್ಟಿರುತ್ತೇನೆ. ಸುಮಾರು ಒಂದು ತಾಸು ನಾನು ಹೇಳಿಕೆ ಕೊಟ್ಟಿದ್ದನ್ನು ಟೈಪ ಮಾಡಿರುತ್ತಾರೆ. ದೂರನ್ನು ಕೊಟಾದ ನಂತರ ನೆರಳು ಸಾಕ್ಷಿ ಲೋಕಾಯುಕ್ತ ಕಛೇರಿಗೆ ಬಂದರು.

8. ದಿನಾಂಕಃ 03-01-2014 ರಂದು 11-ಇ ಅರ್ಜಿಯನ್ನು ಕೊಟ್ಟರು. ನಾನು ದೂರಿನಲ್ಲಿ ಆ ಅರ್ಜಿ ಸಲ್ಲಿಸಿದ ದಿನಾಂಕ, ಅರ್ಜಿ ನಂಬರನ್ನು ಸರಿಯಾಗಿ ನಮೂದು ಮಾಡಿದ್ದೇನೆ. ದಿನಾಂಕಃ 03-01-2014 ರಂದು ಕೊಟ್ಟ ಅರ್ಜಿ ನಂಬರ ಮತ್ತು ದಿನಾಂಕ ಸರಿ ಇದೆ. ಈಗ ನನಗೆ ತೋರಿಸಿದ ದಾಖಲೆಯಲ್ಲಿ ಅರ್ಜಿ ದಿನಾಂಕಃ 21-01-2014 ಎಂದು ನಮೂದು ಆಗಿದೆ ಎಂದರೆ ಸರಿ. ಸದರಿ ನೋಟಿಸನ್ನು ನಿ.ಪಿ.1 ಎಂದು ಗುರುತಿಸಲಾಯಿತು. ಅರ್ಜಿ ಸಂಖ್ಯೆ: 30030813277024 ಇರುತ್ತದೆ. ನಾನು ದೂರಿನಲ್ಲಿ ಬರೆದಿರುವ ಮಾಹಿತಿಯನ್ನು ಓದಿಕೊಂಡು ಸಹಿ ಮಾಡಿದ್ದೇನೆ. ನನ್ನ ದೂರಿನಲ್ಲಿ ನಮೂದು ಮಾಡಿರುವ ದಿನಾಂಕ ಮತ್ತು ಅರ್ಜಿ ಸಂಖ್ಯೆ 30030813277027 ದಿನಾಂಕಃ 03.01.2014 ಎಂದು ನಮೂದು ಆಗಿದೆ ಎಂದರೆ ಸರಿ. ನ್ಯಾಯಾಲಯಕ್ಕೆ ಹಾಜರಪಡಿಸಿರುವ ದಾಖಲೆಗಳು ನಮ್ಮ ದೂರಿನಲ್ಲಿ ನಮೂದಿಸಿರುವ ದಾಖಲೆಗಳು ಬೇರೆ ಎಂದರೆ ಸರಿ.

9. ಇದಕ್ಕೂ ಮೊದಲು ಸರ್ವೆ ಮಾಡಿಸಿರುತ್ತೇವೆ. ಸರ್ವೆ ಮಾಡಿಸಲು ಪಹಣಿ, ಆಕಾರಬಂದ, ಟಿಪ್ಪಣಿ, ಗುರುತಿನ ಚೀಟಿ ಕೊಟ್ಟಿರುತ್ತೇವೆ. ದಿನಾಂಕಃ 03.01.2014 ರಂದು ಅರ್ಜಿ ಸಲ್ಲಿಸಿದ್ದು 2015 ರಲ್ಲಿ ಆರೋಪಿಗೆ ಸದರಿ ಜಮೀನಿನ ಸರ್ವೆ ಮಾಡಲು ಅಲಾಟಮೆಂಟ ಆಯಿತು. 14.03.2014 ರಂದು ಆರೋಪಿಗೆ ಆ ಜಮೀನಿನ ಸರ್ವೆ ಮಾಡಲು ಅಲಾಟ ಆಗಿದ್ದು 20 ದಿನಗಳ ನಂತರ ನನಗೆ ಫೋನ್ ಮಾಡಿದರು. ಕಾರಣ ಅರ್ಜಿ ಮೇಲೆ ನನ್ನ ನಂಬರ ಇತ್ತು. ನಾವು ಕೊಟ್ಟಿದ್ದ ಅರ್ಜಿಯ ಮೇಲೆ ನನ್ನ ಫೋನ್

ನಂಬರ ಬರೆದಿತ್ತು ಆದರೆ ನ್ಯಾಯಾಲಯಕ್ಕೆ ಹಾಜರಪಡಿಸಿರುವ ಅರ್ಜಿಯಲ್ಲಿ ಇರುವುದಿಲ್ಲ. ಆರೋಪಿ ಬಂದು ಸರ್ವೆ ಮಾಡಿದ ದಿನಾಂಕ ನೆನಪಿಲ್ಲ. ಸರ್ವೆ ಮಾಡುವ ಕಾಲಕ್ಕೆ ಹದ್ದುಬಸ್ತನಲ್ಲಿರುವ ಜಮೀನುಗಳ ಮಾಲೀಕರಿಗೆ ಮತ್ತು ಸುತ್ತ ಮುತ್ತ ಜಮೀನುಗಳವರಿಗೆ ನೋಟಿಸ ಕೊಡುತ್ತಾರೆ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಆ ರೀತಿ ಹದ್ದುಬಸ್ತನಲ್ಲಿರುವ ಅಥವಾ ಸುತ್ತ ಮುತ್ತ ಜಮೀನವರಿಗೆ ನೋಟಿಸ ಕೊಟ್ಟಿಲ್ಲ. ಅರ್ಜಿ ಕೊಡುವ ಮೊದಲು ಸದರಿ ಸರ್ವೆ ನಂಬರಗೆ ಸಂಬಂಧಪಟ್ಟಂತೆ ಯಾವುದೇ ತಿದ್ದುಪಡಿಗಳು ಆಗಿರಲಿಲ್ಲ. ಆರೋಪಿಗೆ ಅಲಾಟಮೆಂಟ ಮಾಡುವ ಮೊದಲು ಒಂದು ವರ್ಷಕಾಲ ತಿದ್ದುಪಡಿ ವಿಷಯದಲ್ಲಿ ಸಮಯ ತೆಗೆದುಕೊಂಡಿದ್ದು ನಂತರ ಎಲ್ಲ ತಿದ್ದುಪಡಿ ಆದ ನಂತರ ಆರೋಪಿಗೆ ಕಡತವನ್ನು ಕೊಟ್ಟಿರುತ್ತಾರೆ. ದಿನಾಂಕಃ 25.01.2015 ರಂದು ನೊಟೀಸ ಕೊಟ್ಟ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಂತರ ದಿನಾಂಕಃ 31.01.2015 ರಂದು ಆರೋಪಿ ಬಂದು ಸರ್ವೆ ಮಾಡಿರುತ್ತಾರೆ ಎಂದರೆ ನನಗೆ ದಿನಾಂಕ ಗೊತ್ತಿಲ್ಲ. ದಿನಾಂಕಃ 31.01.2015 ರಂದು ಸರ್ವೆ ಮಾಡಿ ಅಲ್ಲಿ ಸುತ್ತ ಮುತ್ತಲ ಜಮೀನಿನವರ, ಗ್ರಾಮ ಸಾಕ್ಷಿದಾರರ ಸಹಿ, ಹಿಡುವಳಿದಾರರ ಸಹಿ, ಹಕ್ಕು ವರ್ಗಾಯಿಸುವವರ ಸಹಿ, ಹಕ್ಕು ಪಡೆಯುವರ ಸಹಿ ಇವುಗಳನ್ನು ಪಡೆದುಕೊಂಡು ನಕ್ಷೆ ತಯಾರಿಸಿ ಅದೇ ದಿನ ಕೇಸವರ್ಕಗೆ ಕೊಟ್ಟಿರುತ್ತಾರೆ ಎಂದರೆ ಗೊತ್ತಿಲ್ಲ. 11-ಇ ನಕ್ಷೆಯನ್ನು ಸುಪರವೈಸರ್ ಮತ್ತು ಎ.ಡಿ.ಎಲ್.ಆರ್. ಮಾಡುತ್ತಾರೆ.

10. ಆರೋಪಿಗೆ 11-ಇ ನಕ್ಷೆ ಬಗ್ಗೆ ಕೇಳಿದಾಗ ಆರೋಪಿ ಮುಖಾಮುಖಿಯಾಗಿ ಬೇಟಿಯಾಗುವಂತೆ ಹೇಳಿದ್ದು ನಾನು ಬೇಟಿಯಾದಾಗ 7,000/- ರೂಪಾಯಿಗಳನ್ನು ಕೇಳಿದ ಎಂಬ ಬಗ್ಗೆ ದೂರಿನಲ್ಲಿ ಮತ್ತು ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿ. ಫೋನ್‌ನಲ್ಲಿ ಆರೋಪಿ ಕೇಳಿರುತ್ತಾನೆ. ದಿನಾಂಕಃ 24.02.2015 ರಿಂದ 28.02.2015ರ ವರೆಗೆ ವೈಸ ರಿಕಾರ್ಡರ ನನ್ನ ಬಳಿಯಲ್ಲಿಯೇ ಇತ್ತು. ದಿನಾಂಕಃ 24.02.2015ರಂದು ಲೋಕಾಯುಕ್ತ ಕಛೇರಿಗೆ ಹೋದಾಗ ನಾನು ನನ್ನ ಮೊಬೈಲ ನಂಬರನ್ನು ಮತ್ತು ಹೆಸರನ್ನು ಬರೆದುಕೊಟ್ಟಿದ್ದೆ. ದಿನಾಂಕಃ 24.02.2015 ರಿಂದ 28.02.2015ರ ಅವದಿಯಲ್ಲಿ ಲೋಕಾಯುಕ್ತ ಕಛೇರಿಯಿಂದ ಏನಾಗಿದೆ ಎಂದು ನನ್ನನ್ನು ಸಂಪರ್ಕ ಮಾಡಿ ವಿಚಾರ ಮಾಡಲಿಲ್ಲ. ವೈಸ ರಿಕಾರ್ಡ ಮಾಡಿಕೊಂಡು ಬರುವಂತೆ ದಿನಾಂಕಃ 24.02.2015 ರಂದೆ ಹೇಳಿದ್ದರು.

ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದುವಡಲಾಯಿತು.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.